ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1013 / 2021.

ಫ್ರಾ.ಸಾ.: 8
ಚಾ.ಸಾ.: 9

| | | |
|---|---|---|
| ಹೆಸರು | : | ದೇವರಾಜಯ್ಯ |
| ತಂದೆಯ ಹೆಸರು | : | ಉತ್ತಯ್ಯ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಿಳಾಸ | : | ಎಂ. ಶೆಟ್ಟಳ್ಳಿ |

... ......................................................................................................... ...

ದಿನಾಂಕ 17 ನೇ ಏಪ್ರಿಲ್ 2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ : -

1. ಎರಡನೇ ಆರೋಪಿ ನನ್ನ ಮಗ. ಮೊದಲನೇ ಆರೋಪಿ ಬಗ್ಗೆ ಗೊತ್ತಿಲ್ಲ. 2017 ರಲ್ಲಿ Hero Honda Splendar motor bike ಅನ್ನು ಖರೀದಿಸಿರುತ್ತೇವೆ. ಅದನ್ನು 2 ನೇ ಆರೋಪಿ ಉಪಯೋಗಿಸುತ್ತಿದ್ದರು. ಗೊ◌ೀಣಿಕೊಪ್ಪ ಪೊಲೀಸರು ನಮ್ಮ ಊರಿಗೆ ಬಂದು ದ್ವಿ ಚಕ್ರ ವಾಹನವನ್ನು ವಶಕ್ಕೆ ಪಡೆಯಲು ಬಂದಿದ್ದು, ಅದರಂತೆ ಎರಡನೇ ಆರೋಪಿ ನನ್ನ ಮಗ ಗೊ◌ೀಣಿಕೊಪ್ಪ ಪೊಲೀಸರಿಗೆ ದ್ವಿ ಚಕ್ರ ವಾಹನವನ್ನು ನೀಡಿರುತ್ತಾನೆ.

2. ದಿ. 06.08.2021 ರಂದು ನ್ಯಾಯಾಲಯದ ಆದೇಶದ ಮೇರೆಗೆ ಗೊ◌ೀಣಿಕೊಪ್ಪ ಪೊ. ಠಾಣೆಗೆ ಹಾಜರಾಗಿ ಪೊಲೀಸರ ವಶದಲ್ಲಿದ್ದ ದ್ವಿ ಚಕ್ರ ವಾಹನವನ್ನು ಮಹಜರ್ ಕ್ರಮ ಜರುಗಿಸಿ ನನ್ನ ವಶಕ್ಕೆ ಪಡೆದುಕೊಂಡಿರುತ್ತೇನೆ.. ಸಾಕ್ಷಿಯು ಸ್ವತ್ತು ಬಿಡುಗಡೆ ಮಹಜರ್ ಅನ್ನ◌ು ನೋಡಿ ಗುರುತಿಸಿದ್ದು ಈಗಾಗಲೇ ನಿ. ಪಿ. 15 ಎಂದು ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿ. ಪಿ. 15(ಬಿ) ಎಂದು ಗುರುತಿಸಲಾಯಿತು. ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ. ಪಿ. 16 ಎಂದು ಗುರುತಿಸಲಾಗಿದೆ.

ಮುಖ್ಯ ವಿಚಾರಣೆ ◌ಃ ಮುಕ್ತಾಯ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

<u>ಪಾಟೀ ಸವಾಲು: - ಮಾನ್ಯ ಸ ಸ ಅ ರವರಿಂದ</u> : -

1. ಎರಡನೇ ಆರೋಪಿಯು ಮೊದಲನೇ ಆರೋಪಿಯೊಂದಿಗೆ ಸೇರಿಕೊಂಡು ಗೋಣಿಕೊಪ್ಪದ ಅಪೊಲೋ ಫಾರ್ಮಸಿ ಅಂಗಡಿಯಲ್ಲಿ 68,000/- ರೂ ನಗದು, ಔಷಧಿಗಳು ಹಾಗೂ ಕಂಪ್ಯೂಟರ್‌ನ ಮೋಡಮ್ ಅನ್ನು ಕಳ್ಳತನ ಮಾಡಿರುವ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ನನ್ನ ಮಾಲೀಕತ್ವದಲ್ಲಿ ದ್ವಿ ಚಕ್ರ ವಾಹನವನ್ನು ಈ ಕೃತ್ಯಕ್ಕೆ ಬಳಸಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಆರೋಪಿ ನನ್ನ ಮಗ ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಮುಕ್ತಾಯ

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಪಾಟೀ ಸವಾಲುಃ ಮುಕ್ತಾಯ

<u>ಮರು ವಿಚಾರಣೆ : -</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.